# ಕನ್ನಗತ್ತಿ

ಶಿವಶರಣರ ಚಳವಳಿ 12ನೇ ಶತಮಾನದಲ್ಲಿ ಘಟಿಸಿದ ವಿಸ್ಮಯವೇ ಸರಿ. ಆ ಚಳವಳಿ ಐತಿಹಾಸಿಕ ಅಭೂತಪೂರ್ವ ಘಟನೆಯೆಂದು ಮತ್ತೆ ಮತ್ತೆ ಉಲ್ಲೇಖ ಆಗುತ್ತಲೇ ಇರುತ್ತದೆ. ಕಾರಣವಿಷ್ಟೇ ಇಂತಹ ಸಂಘಟನಾತ್ಮಕ, ಪ್ರಜಾಸತ್ತಾತ್ಮಕ, ಜನಸಾಮಾನ್ಯರ ಚಳವಳಿ ಇತಿಹಾಸದಲ್ಲಿ ಹಿಂದೆಯೂ– ಈಗಲೂ ಘಟಿಸಿಲ್ಲ. ಭಿನ್ನ ಭಿನ್ನ ಕಾಯಕದ, ವರ್ಗದ, ಮನೋಭಾವದ ಹಲವು ವ್ಯಕ್ತಿಗಳು ಈ ಚಳವಳಿಯಲ್ಲಿದ್ದರು. ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯೊಂದನ್ನು ಒಡೆದು ಕಟ್ಟುವ, ಪುನರ್ ರೂಪಿಸುವ ಚಳವಳಿಯಾಗಿದೆ. ಮೇಲ್ವರ್ಗದವರನ್ನು, ಕೆಳವರ್ಗದವರನ್ನು ತನ್ನ ಒಡಲಲ್ಲಿ ಇರಿಸಿಕೊಂಡಿತ್ತು. ಮೇಲ್ವರ್ಗದವರ ಮೇಲ್ಮೆಯನ್ನು, ಕೆಳವರ್ಗದವರ ಕೀಳರಿಮೆಯನ್ನು ಏಕಕಾಲಕ್ಕೆ ನೀಗುವ, ಒಂದೇ ಪಾತಳಿಯಲ್ಲಿ ನಿಲ್ಲಿಸುವ ಆಶಯ ಇದರ ಬೆನ್ನಬದಿಗೆ ಇತ್ತು.

ಹಲವು ದೈವ, ಭಾಷೆ, ಆಹಾರ, ಸಂಸ್ಕೃತಿ, ಕಾಯಕದ ಹಿನ್ನೆಲೆಯನ್ನುಳ್ಳ ಇವರನ್ನೆಲ್ಲ ಸಾಮೂಹಿಕವಾಗಿ ಶರಣರು ಎಂದು ಕರೆಯಲಾಯಿತು. ಶರಣರೆಲ್ಲರಿಗೂ ಶಿವನೇ ದೈವವಾಗಿದ್ದ. 'ಶರಣಸತಿ– ಲಿಂಗಪತಿ' ಎಂಬ ಕಲ್ಪನೆಯಡಿ ಶಿವನನ್ನು ಪತಿಯಾಗಿಸಿ ಎಲ್ಲ ಶರಣರು ಸತಿಯರಾಗಿದ್ದರು. ಈ ಸಮೂಹದಲ್ಲಿ ಅಕ್ಷರ ಬಲ್ಲವರೂ, ಅಕ್ಷರವನ್ನು ಅರಿಯದವರೂ ಇದ್ದರು. ಅಕ್ಷರ ಕಲಿಯದಿದ್ದ ಕೆಳವರ್ಗದ ಶರಣರು ಯಾವ ಕಾವ್ಯದ ಕುರಿತಾಗಿ ಅಲಂಕಾರ, ಛಂದಸ್ಸು ಅರಿಯದಿದ್ದರೂ ಗೇಯರೂಪದ ವಚನಗಳನ್ನು ರಚಿಸಬಲ್ಲವರಾಗಿದ್ದರು. ಹೀಗಾಗಿಯೇ ಕೆಲವು ಬಾರಿ ಶರಣರ ಕಥೆಗಳನ್ನು ಪವಾಡ ಅಥವಾ ಲೀಲೆ ಎನ್ನುವಂತೆ ನೋಡಲಾಗುತ್ತದೆ. ಕೆಲವು ಶರಣರ ಕತೆಗಳಂತೂ ಲೀಲಾವಿನೋದ ಎನ್ನುವಂತೆಯೇ ಗುರುತಿಸಲಾಗಿದೆ.

'ಕನ್ನಗತ್ತಿ' ಇತ್ತೀಚೆಗೆ ನಡೆದ ಸಿಜಿಕೆ ರಾಷ್ಟ್ರೀಯ ರಂಗೋತ್ಸವದಲ್ಲಿ ಪ್ರದರ್ಶನ ಕಂಡ ನಾಟಕ. ಸಿಜಿಕೆ ಕಟ್ಟಿದ 'ರಂಗನಿರಂತರ' ಅವರ ಕಾಲವಶವಾದ ನಂತರವೂ ತನ್ನ ನಿರಂತರತೆ, ಜೀವಂತಿಕೆ ಉಳಿಸಿಕೊಂಡಿದೆ. ಸಿಜಿಕೆ ಎಂಬ ಅದ್ಭುತ ರಂಗಸಂಘಟಕನ ಕೈಗೆ ಸಿಕ್ಕಿದವರಲ್ಲಿ ಸಂಪರ್ಕಕ್ಕೆ ಬಂದವರಲ್ಲಿ ಕವಿ, ಕಲಾವಿದ ಸಂಗೀತಗಾರರು, ನಟರೂ ಸೇರಿದ್ದಾರೆ. ಸ್ಪರ್ಶಮಣಿಯಂತಿದ್ದ ಸಿಜಿಕೆ ಸಾಮಿಪ್ಯಕ್ಕೆ ಬಂದವರೆಲ್ಲ ಅವರವರ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿದ್ದಾರೆ. ಸಿಜಿಕೆ ಎಂಬ ಮರುಜವಣೆಯ ಸ್ಪರ್ಶಕ್ಕೆ ಒಳಗಾದವರಲ್ಲಿ ಕನ್ನಡದ ಹೆಸರಾಂತ ಕವಿ ಲಕ್ಷ್ಮಿಪತಿ ಕೋಲಾರ ಕೂಡ ಒಬ್ಬರು. ಅವರು ಕನ್ನಾಗ್ರ ಮಾರಯ್ಯನನ್ನು ಕುರಿತು ಬರೆದ ನಾಟಕ 'ಕನ್ನಗತ್ತಿ' ಅದನ್ನು ನಿರ್ದೇಶಿಸಿದವರು ಬಸವಲಿಂಗಯ್ಯನವರು.

ಕನ್ನಡದ ಮಾರಿತಂದೆ ಅಥವಾ ಕನ್ನಗತ್ತಿ ಮಾರಯ್ಯ ಎಂದೇ ಕರೆಸಿಕೊಂಡಿರುವ ಮಾರಯ್ಯ ವೃತ್ತಿಯಿಂದ ಕಳ್ಳನಾಗಿದ್ದವನು. ಶಿವಭಕ್ತರಲ್ಲದವರ ಮನೆಗೆ ಮಾತ್ರ ಕನ್ನಹಾಕುತ್ತಿದ್ದ ಅವನು ಅಗತ್ಯವಾದಷ್ಟು ತನಗಿಟ್ಟುಕೊಂಡು ಉಳಿದಿದ್ದನ್ನು ಇಲ್ಲದವರಿಗೆ ಹಂಚುತ್ತಿದ್ದ. ಅವರನ ನಾಲ್ಕು ವಚನಗಳು ಲಭ್ಯವಾಗಿದ್ದು ಕಳ್ಳತನದಲ್ಲೂ ಆಧ್ಯಾತ್ಮಿಕ ಪರಿಭಾಷೆಯನ್ನು ಬಳಸಿದ್ದಾನೆ. ಕಳ್ಳತನದಲ್ಲಿ ತನಗೊಂದು ವೃತ್ತಿಧರ್ಮವಿದೆ ಎಂಬುದನ್ನು ತನ್ನ ವಚನದಲ್ಲಿ ಹೇಳಿಕೊಳ್ಳುತ್ತಾನೆ.

ಕತ್ತಲೆಯಲ್ಲಿ ಕನ್ನವನಿಕ್ಕಿದಡೆ/ ಎನಗೆ ಕತ್ತಿಯ ಕೊಟ್ಟ ಕರ್ತುವಿಗೆ ಭಂಗ/ ಅವರು ಮರೆದಿರ್ದಲ್ಲಿ ಮನೆಯ ಹೊಕ್ಕಡೆ/ ಎನ್ನ ಚೋರತನದ ಅರಿಕೆಗೆ ಭಂಗ/ ಮರದಿರ್ದವರ ಎಬ್ಬಿಸಿ ಅವರಿಗೆ ಅವರೊಡವೆಯ ತೋರಿ/ ಎನ್ನೊಡವೆಯ ತಂದೆ ಮಾರನ ವೈರಿ ಮಾರೇಶ್ವರ?

ಇದ್ದವರು ವಿಪರೀತ ಸಂಪತ್ತನ್ನು ಅಕ್ರಮವಾಗಿ ಶೇಖರಿಸಿಟ್ಟಿದ್ದರೆ ಅವರ ಮುಂದೆಯೇ ಅವರ ಸಂಪತ್ತನ್ನು ಇಲ್ಲದವರಿಗೆ ಹಂಚುತ್ತೇನೆ ಎಂಬ ದಾರ್ಷ್ಟ್ಯ ಮೆಚ್ಚುವಂತದ್ದೇ. ಆದರೆ, ಕೊಲೆ ಸುಲಿಗೆ ಇವು ಸಮಾಜದ ದಾರಿಯನ್ನು ತಪ್ಪಿಸುವಂತಹ ಅವ್ಯವಹಾರಗಳು ಎಂದು ಗುರುತಿಸಲಾಗಿದೆ. ಹೀಗಿದ್ದಾಗ 'ಕನ್ನ ಹಾಕುತ್ತೇನೆ' ಎಂಬ ಮಾರಯ್ಯನ ಕಾಯಕ ಸಮಾಜದ ಅಥವಾ ವ್ಯಕ್ತಿಯ ನೈತಿಕತೆಯನ್ನು ಪ್ರಶ್ನಿಸುವುದಿಲ್ಲವೇ ಎಂಬ ಚರ್ಚೆಯನ್ನು ಹುಟ್ಟುಹಾಕುತ್ತದೆ. ಈಗಾಗಲೇ ಹಲವು ಕುಖ್ಯಾತ ಅಪರಾಧಿಗಳು ತಾವು ನಡೆಸಿದ ಕಳ್ಳತನ, ಕೊಲೆ, ಅತ್ಯಾಚಾರಗಳನ್ನು ಕುರಿತು ಬರೆದಿರುವ ಆತ್ಮಚರಿತ್ರೆಗಳು ಸಮಾಜದ ಮೇಲೆ ಬೀರುವ ಪರಿಣಾಮವನ್ನು ಕುರಿತು ಚರ್ಚೆಯಾಗಿವೆ.

ಈ ಎಲ್ಲ ಚರ್ಚೆಗಳಿಂದ ಹೊರತಾಗಿಯೂ 'ಕನ್ನಗತ್ತಿ' ನಾಟಕ ತನ್ನ ಶರಣತನದ ಲೀಲಾವಿನೋದದಿಂದಲೇ ಗಮನ ಸೆಳೆಯುತ್ತದೆ. ಬಸವಣ್ಣನ ಸಂಪರ್ಕಕ್ಕೆ ಬಂದ ನಂತರ ಚೋರತನವನ್ನು ಬಿಟ್ಟು ಶರಣನಾಗುವ ಮಾರಯ್ಯ ಒಂದು ಸಂಕೇತವಾಗಿಯೇ ನಿಲ್ಲುತ್ತಾನೆ. ಸಮಕಾಲೀನ ಸಂದರ್ಭದಲ್ಲಿ ಸಂಪತ್ತಿನ ಅಪಾರವಾದ ಸಂಗ್ರಹವೇ ಕಾರಣವಾಗಿ ದೇಶದ ಎಲ್ಲೆಡೆ ತೆರಿಗೆ ಇಲಾಖೆಯ ದಾಳಿ ನಡೆಯುತ್ತಿದೆ. ಈ ದಾಳಿಗಳನ್ನು ನೇರ ಸಂಪರ್ಕದಲ್ಲಿ ಇಲ್ಲದಿದ್ದರೂ ಜನಸಾಮಾನ್ಯರು ಆತಂಕಪಟ್ಟಿದ್ದಿದೆ. ಸಾಧು – ಸಂತರು ಸಹ ನೂರಾರು ಕೋಟಿ ಒಡೆಯರಾಗಿದ್ದಾರೆ. ದೇಶ ವಿದೇಶಗಳಲ್ಲಿ ಉದ್ದಿಮೆಗಳಿಗೆ ಹಣ ಹೂಡಿದ್ದಾರೆ. ತಿರುಪತಿ ತಮ್ಮಪ್ಪನೇ ತನ್ನ ವಿವಾಹಕ್ಕೆ ಕುಬೇರನ ಬಳಿ ಸಾಲ ಮಾಡಿ ತೀರಿಸುತ್ತಿದ್ದಾನೆ. ಎಂಬುದು ದೇವರಿಗೂ ಬಡತನವಿದೆ ಎಂಬುದಕ್ಕೆ ಸಾಕ್ಷಿ. ಕನ್ನಗತ್ತಿ ಮಾರಯ್ಯ ದೇಶದ ಆರ್ಥಿಕತೆಯ ಬಗ್ಗೆ ಸಂಪತ್ತಿನ ಹಂಚಿಕೆಯ ಬಗ್ಗೆ ಬಡವ– ಶ್ರೀಮಂತರೆಂಬ ವ್ಯವಸ್ಥೆಯ ಬಗ್ಗೆ ಬಂಡುಕೋರನಂತೆ ಮಾತನಾಡುತ್ತಾನೆ. ಇಂಗ್ಲಿಷ್ ಸಾಹಿತ್ಯದ ರಾಬಿನ್ ಹುಡ್‌ನಂತಹ ವ್ಯಕ್ತಿತ್ವವುಳ್ಳ ಮಾರಯ್ಯ ಚಿತ್ರಶೀಲವುಳ್ಳ ಶರಣನಾಗಿ ಶರಣ ಪರಂಪರೆಯಲ್ಲಿ ಕಾಣಿಸಿಕೊಂಡಿದ್ದಾನೆ.

■ **ಅಮೃತಮತಿ**

## ಮಾತೇ ಮುತ್ತು

- ಕತ್ತಲಿನ ನಡುವೆ ಬೆಳಕನ್ನು ಕಾಣುವಾತ ಆಶಾವಾದಿ. ಹಿಗ್ಗನ್ನು ಹುಡು ಹುಡುಕುತ್ತಿರುವವನೆ ನಿರಾಶಾವಾದಿ.
  —ದ.ರಾ. ಬೇಂದ್ರೆ
- ದುಡಿಮೆಗಾರನಿಗೆ ಯಾವದೋ ಒಂದು ದಿನ ಮರಣ ವಿಶ್ರಾಂತಿ; ಸೋಮಾರಿಗಾದರೊ ದಿನದಿನವೂ ಮರಣಯಾತನೆ.
  —ಎಸ್.ವಿ. ರಂಗಣ್ಣ
- ಈ ಭೂಮೀಲಿ ಜೀವಿಸೋಕೆ ದೇವರಿಗೆ ಕೊಡೋ ಬಾಡಿಗೆ ಸುತ್ತಮುತ್ತಲೂ ಇರೋ ಜನರಿಗೆ ಉಪಯೋಗವಾಗಿರೋದೆ.
  —ಟಿ.ಪಿ. ಕೈಲಾಸಂ
- ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು, ಕಲ್ಲಿದ್ದಲ ಕಾವಾಗಬೇಕು.
  —ಕುವೆಂಪು
- ಕೊಲ್ಲ ಬಲ್ಲವ ಮೆಲ್ಲ ಮೆಲ್ಲನೆ ಮೃತ್ಯುಪಥವ ಹಿಡಿವನು.
  —ಸಿಪಿಕೆ
- ದುಡ್ಡಿನ ಬಡತನವಿರುವವನು ಬದುಕಿಯಾನು. ಬುದ್ಧಿಯ ಬಡತನವಿರುವವನು ಬದುಕುವುದು ಅವಶ್ಯ.
  —ಸೋಮದೇವ
- ಪ್ರೇಮ ವೃದ್ಧಿಗೆ ಕಾಮ ದೊಡ್ಡ ಸೋಪಾನ.
  —ಅನುಪಮಾ ನಿರಂಜನ
- ಏಕಾಗ್ರಚಿತ್ತರಾಗಿ ಕುಳಿತಾಗ ನಮ್ಮೊಳಗೆ ಮೂಡುವ ಪ್ರಕಾಶ– ರೂಪಗಳೇ ಕನಸುಗಳು.
  —ವಿ.ಕೃ. ಗೋಕಾಕ
- ದೇಹದೊಳಗೆ ದೇವಾಲಯವಿರ್ದು ಮತ್ತೆ ಬೇರೆ ದೇವಾಲಯವೇಕೆ?
  —ಅಲ್ಲಮ
- ಅಹಿಂಸೆ ಮನಸ್ಸು ಬೆಳೆಸಿಕೊಳ್ಳಬೇಕಾದ ಒಂದು ಪ್ರವೃತ್ತಿ.
  —ಮಾಸ್ತಿ ವೆಂಕಟೇಶ್ ಐಯ್ಯಂಗಾರ್